

ಒಬ್ಬನೇ ಒಬ್ಬ ಸರ್ವಾಧಿಕಾರಿಯೂ ಇಲ್ಲ. ಎಷ್ಟೋ ಮಂದಿ ವ್ಯಂಗ್ಯಚಿತ್ರಕಾರರು, ತಮ್ಮ ಸದ್ದಡಗುವ ಮುನ್ನ 'ಸರ್ವಾಧಿಕಾರಿಗೆ ಒಂದಿಷ್ಟು ಹಾಸ್ಯಪ್ರಜ್ಞೆ ಇರಬಾರದಿತ್ತೆ?' ಎಂದು ಪರಿತಪಿಸಿರಲಿಕ್ಕೆ ಸಾಕು. ಮತ್ತೆ ಹಾಸ್ಯಪ್ರಜ್ಞೆಯಿರುವವನಿಗೆ ಸರ್ವಾಧಿಕಾರಿಯಾಗುವ ಅವಕಾಶವಾದರೂ ಎಲ್ಲಿರುತ್ತದೆ? ವ್ಯಂಗ್ಯಚಿತ್ರಕಾರನ ಬಗ್ಗೆ ಪಂಡಿತ್ ನೆಹರೂರಂಥ ಮಹಾ ಮುತ್ಸದ್ಧಿ ಮಾತ್ರ ಸಕಾರಾತ್ಮಕವಾಗಿ ಪ್ರತಿಕ್ರಿಯಿಸಬಲ್ಲವರಾಗಿದ್ದರು: ''ನಿಜವಾದ ವ್ಯಂಗ್ಯಚಿತ್ರಕಾರ ಕೇವಲ ತಮಾಷೆ ಮಾಡುವವನಲ್ಲ. ಅವನು ಘಟನೆಯೊಂದರ ಆಂತರಿಕ ಮಹತ್ವವನ್ನು ಗ್ರಹಿಸಿ, ಗ್ರಹಿಸಿದ್ದನ್ನು ಕೆಲವೇ ರೇಖೆಗಳಲ್ಲಿ ಚಿತ್ರಿಸಿ ಇತರರ ಮೇಲೆ ಪ್ರಭಾವ ಬೀರುವವನು... ಅದೊಂದು ಅಪರೂಪದ ವರ; ಭಾರತದಲ್ಲಷ್ಟೇ ಅಲ್ಲ, ಬೇರೆ ಕಡೆಗಳಲ್ಲಿ ಕೂಡ ಅಪರೂಪವಾಗಿರುವ ವರ. ಅದಕ್ಕೆ ನಾವೆಲ್ಲರೂ ಕೃತಜ್ಞರಾಗಿರಬೇಕು. ಯಾಕೆಂದರೆ ನಾವು ಬಡಾಯಿ ಕೊಚ್ಚುವವರೋ ಆತ್ಮಕೇಂದ್ರಿತರೋ ಆದಾಗ ಒಮ್ಮೊಮ್ಮೆಯಾದರೂ ನಮ್ಮ ಅಹಂಕಾರದ ಮುಸುಕನ್ನು ಕಿತ್ತೆಸೆಯುವುದೊಳ್ಳೆಯದು...'' ವ್ಯಂಗ್ಯಚಿತ್ರಕಾರರಿಗೆ ನಿಜಕ್ಕೂ ಸ್ಫೂರ್ತಿದಾಯಕವಾದ ಮಾತುಗಳಿವು.

ಸದಾ ಕಲ್ಪನಾಲೋಕದಲ್ಲೇ ವಿಹರಿಸುವ ಪರಿಪಾಟವುಳ್ಳವರು ಆಘಾತವುಂಟುಮಾಡುವ ಚಿಕಿತ್ಸೆಗೆ ಗುರಿಯಾಗುವುದೊಳ್ಳೆಯದು. ಒಂದು ವ್ಯಂಗ್ಯಚಿತ್ರ ಅಂಥ ಚಿಕಿತ್ಸೆಯನ್ನು ನೀಡಿ ಹಾಗೆ ವಿಹರಿಸುತ್ತಿರುವವರನ್ನು ಭೂಮಿಗೆ ಕರೆತರಬಲ್ಲದು – ಅಂಥವರು ವ್ಯಂಗ್ಯಚಿತ್ರದಲ್ಲಿರುವ ಧ್ವನಿಯನ್ನು ಗುರುತಿಸುವಂತಾದರೆ ಮಾತ್ರ.

1871ರಲ್ಲಿ ಅಮೆರಿಕದ ಡೆಮೊಕ್ರಾಟಿಕ್ ಪಕ್ಷದ ಧುರೀಣನಾಗಿದ್ದ ವಿಲಿಯಂ ಮರ್ಸಿ ಟ್ವೀಡ್, 'ಬಾಸ್ ಟ್ವೀಡ್' ಎಂದೇ ಹೆಸರಾಗಿದ್ದವನು. ಅವನನ್ನು